# ಗೂಗಲ್ ಪೇನಿಂದ 'ಟ್ಯಾಪ್ ಟು ಪೇ'

■ **ಶಶಿಕುಮಾರ್ ಸಿ.**







ಆಪ್ ಆಧಾರಿತ ಪೇಮೆಂಟ್ ಸೇವೆ ಒದಗಿಸುವ ಹಾಗೂ ಯುಪಿಐ ಪಾವತಿ ಸೇವೆಗಳಲ್ಲಿ ಒಂದಾದ 'ಗೂಗಲ್ ಪೇ' ತನ್ನ ಬಳಕೆದಾರರಿಗೆ 'ಟ್ಯಾಪ್ ಟು ಪೇ' ಎಂಬ ಟೋಕನೈಸೇಷನ್ ಸೇವೆಯನ್ನ ಪರಿಚಯಿಸಿದೆ.

ಟೋಕನೈಸೇಷನ್ ಮೂಲಕ ಡೆಬಿಟ್ ಮತ್ತು ಕ್ರೆಡಿಟ್ ಕಾರ್ಡ್‌ಗಳನ್ನು ಹೊಂದಿರುವ ಬಳಕೆದಾರರಿಗೆ NFCಶಕ್ತಗೊಂಡ ಪಾಯಿಂಟ್‌ಆಫ್ ಸೇಲ್ ಟರ್ಮಿನಲ್‌ಗಳಲ್ಲಿ ಟ್ಯಾಪ್ ಟು ಪೇ ಮೂಲಕವೇ ಹಣವನ್ನು ವರ್ಗಾಯಿಸಬಹುದು. ಗೂಗಲ್ ಪೇ ಹೊಂದಿರುವ ಆಂಡ್ರಾಯ್ಡ್ ಸ್ಮಾರ್ಟ್‌ಫೋನ್ ಬಳಕೆದಾರರು ತಮ್ಮ ಡೆಬಿಟ್ ಅಥವಾ ಕ್ರೆಡಿಟ್ ಕಾರ್ಡ್ ಬಳಸಿ ತಮ್ಮ ಕಾರ್ಡ್‌ನ ವಿವರಗಳನ್ನ ಹಂಚಿಕೊಳ್ಳದೇ ಪೇ ಮಾಡಬಹುದಾಗಿದೆ.

ಈ ಆಯ್ಕೆಗಾಗಿ ಟ್ಯಾಪ್ ಟು ಪೇ ಫೀಚರ್ಸ್ ಅನ್ನು ಪರಿಚಯಿಸಲಾಗಿದ್ದು, ಇದರ ಮೂಲಕ ತಮ್ಮ ಕ್ರೆಡಿಟ್ ಅಥವಾ ಡೆಬಿಟ್ ಕಾರ್ಡ್ ವಿವರಗಳನ್ನು ಹಂಚಿಕೊಳ್ಳದೆ, ತಮ್ಮ ಫೋನ್‌ಗೆ ಲಗತ್ತಿಸಲಾದ ಸುರಕ್ಷಿತ ಡಿಜಿಟಲ್ ಟೋಕನ್ ಮೂಲಕ ಪೇಮೆಂಟ್ ಅನ್ನು ಪಾವತಿಸಬಹುದು.

ಆ್ಯಂಡ್ರಾಯ್ಡ್ ಸ್ಮಾರ್ಟ್‌ಫೋನ್‌ನಲ್ಲಿ ಗೂಗಲ್‌ಪೇ ಮೂಲಕ ಟ್ಯಾಪ್ ಮತ್ತು ಪೇ ಫೀಚರ್ಸ್ ಅನ್ನು ಸಕ್ರಿಯಗೊಳಿಸಲು ಬಳಕೆದಾರರು ಮೊದಲು ತಮ್ಮ ಡೆಬಿಟ್/ ಕ್ರೆಡಿಟ್ ಕಾರ್ಡ್ ವಿವರಗಳನ್ನು 'ಗೂಗಲ್ ಪೇ'ದೊಂದಿಗೆ ಒಮ್ಮೆ ಸೆಟ್ ಮಾಡಿಡಬೇಕು. ಹೀಗೆ ಮಾಡುವಾಗ ಬ್ಯಾಂಕಿನಿಂದ ನಿಮ್ಮ ಫೋನ್ ಸಂಖ್ಯೆಗೆ ಒಟಿಪಿ ರವಾನೆಯಾಗುತ್ತದೆ. ಆ ಒಟಿಪಿಯನ್ನು ಕಡ್ಡಾಯವಾಗಿ ನಮೂದಿಸಬೇಕು. ಒಟಿಪಿ ನೋಂದಣಿಯ ನಂತರ, NFCಶಕ್ತಗೊಂಡ ಟರ್ಮಿನಲ್‌ಗಳಲ್ಲಿ ಪಾವತಿಗಳನ್ನು ಮಾಡಲು ಈ ಫೀಚರ್ಸ್ ಅನ್ನು ಬಳಸಬಹುದು.

ಟೋಕನೈಸೇಷನ್ ಕ್ರೆಡಿಟ್ ಮತ್ತು ಡೆಬಿಟ್ ಕಾರ್ಡ್ ಸಂಖ್ಯೆಗಳಂತಹ ಸೂಕ್ಷ್ಮ ಡೇಟಾವನ್ನು ಟೋಕನ್‌ಗಳೊಂದಿಗೆ ಬದಲಾಯಿಸಲು ಸಹಾಯ ಮಾಡುತ್ತದೆ. ಅಲ್ಲದೆ ಬಳಕೆದಾರರಿಗೆ ಯಾವುದೇ ಮಾದರಿಯ ವಂಚನೆಯ ಸಾಧ್ಯತೆಗಳು ಉಂಟಾಗದಂತೆ ಕಾರ್ಯನಿರ್ವಹಿಸಲಿದೆ. ಟೋಕನೈಸೇಷನ್ ಫೀಚರ್ಸ್ ಪ್ರಸ್ತುತ ಕೊರೊನಾ ಬಿಕ್ಕಟ್ಟಿನ ಸಮಯದಲ್ಲಿ ಸುರಕ್ಷಿತವಾಗಿ ವಹಿವಾಟು ನಡೆಸಲು ಬಳಕೆದಾರರಿಗೆ ಅವಕಾಶವನ್ನು ನೀಡಲಿದೆ ಎಂಬುದು ಗೂಗಲ್‌ನ ಮಾಹಿತಿ. ಅಲ್ಲದೆ ಆನ್‌ಲೈನ್ ಮತ್ತು ಆಫ್‌ಲೈನ್‌ನಲ್ಲಿ ವ್ಯಾಪಾರಿ ವಹಿವಾಟುಗಳನ್ನು ಇದರ ಮೂಲಕ ಇನ್ನಷ್ಟು ವಿಸ್ತರಿಸಬಹುದಾಗಿದೆ.

ಸದ್ಯ ಗೂಗಲ್ ಪೇ ಟ್ಯಾಪ್ ಟು ಪೇ ಫೀಚರ್ಸ್ ವೀಸಾ ಪಾವತಿ ನೆಟ್‌ವರ್ಕ್ ಹೊಂದಿರುವ ಆಕ್ಸಿಸ್ ಮತ್ತು ಎಸ್‌ಬಿಐ ಕಾರ್ಡ್ ಹೊಂದಿರುವವರಿಗೆ ಮಾತ್ರ ಲಭ್ಯವಾಗಲಿದೆ. ಜೊತೆಗೆ ಭಾರತದಲ್ಲಿ ಟೋಕನೈಸೇಷನ್‌ನೊಂದಿಗೆ ಕಾರ್ಡ್ ಆಧರಿತ ಪಾವತಿಗಳನ್ನು ಇನ್ನಷ್ಟು ವಿಸ್ತರಿಸಲು ಕೋಟಕ್ ಸೇರಿದಂತೆ ಇತರೆ ಬ್ಯಾಂಕ್‌ಗಳ ಜೊತೆಗೆ ಮಾತುಕತೆ ನಡೆದಿದೆ ಎನ್ನಲಾಗಿದೆ. ಹಾಗೆ ನೋಡಿದರೆ ಗೂಗಲ್ ಪೇ ತನ್ನ ಗೂಗಲ್ ಫಾರ್ ಇಂಡಿಯಾ ಮೂಲಕ 2019ರಲ್ಲಿ ಟೋಕನೈಸೇಷನ್ ಫೀಚರ್ಸ್ ಅನ್ನು ಪರಿಚಯಿಸಿದೆ. ಪ್ರತಿ ಫೋನ್‌ಗೆ ವಿಶಿಷ್ಟವಾದ ಡಿಜಿಟಲ್ ಟೋಕನ್ ಬಳಸಿ ವಹಿವಾಟು ನಡೆಸಲು ಇದು ಸುರಕ್ಷಿತ ಮಾರ್ಗವಾಗಿದೆ.

ಟ್ಯಾಪ್ ಟು ಪೇ ಸೇವೆ ಮೂಲಕ ಗ್ರಾಹಕರು ಯಾವುದೇ ಪಿನ್ ಸಂಖ್ಯೆಯನ್ನು ನಮೂದಿಸದೆ ಕೇವಲ ನಿಮ್ಮ ಡೆಬಿಟ್ ಕಾರ್ಡ್ ಅನ್ನು ಗೂಗಲ್ ಪೇ ಮೇಲೆ ಟ್ಯಾಪ್ ಮಾಡಿ ಹಣವನ್ನು ಪಾವತಿಸಬಹುದಾಗಿದೆ. ಇದು ಆ್ಯಂಡ್ರಾಯ್ಡ್ ಸ್ಮಾರ್ಟ್‌ಫೋನ್‌ಗಳಲ್ಲಿ ಲಭ್ಯವಾಗಲಿದೆ. ಇದರಿಂದ ಆಫ್‌ಲೈನ್ ಅಥವಾ ಆನ್‌ಲೈನ್ ವ್ಯಾಪಾರ ಮಾಡುವ ಸಂದರ್ಭದಲ್ಲಿ ಟರ್ಮಿನಲ್‌ಗಳಲ್ಲಿನ POS ಪೇ ಸೇವೆಗಳಲ್ಲಿ ಇದನ್ನು ಬಳಸಬಹುದಾಗಿದ್ದು, ಗ್ರಾಹಕರಿಗೆ ಪೇಮೆಂಟ್ ಪೇ ಮಾಡುವುದು ಇದೀಗ ಇನ್ನಷ್ಟು ಸುಲಭವಾಗಿದೆ. ■

